155 ಸಂಖ್ಯೆ ನಿ:330 - (1)
4RR
2204

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ಇವರು ನಿಯಮ 330 ಅಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ: 01 ಕ್ಕೆ ಮಾನ್ಯ ಇಂಧನ ಸಚಿವರ ಉತ್ತರ:**

**ವಿಷಯ :** ಉಡುಪಿ ಕಾಸರಗೋಡು 400 ಕೆ.ವಿ ವಿದ್ಯುತ್ ಪ್ರಸರಣ ಮಾರ್ಗದಲ್ಲಿ 3,450 ಎಕ್ರೆ ಕೃಷಿ ಭೂಮಿಯು ಹಾಗೂ 2 ಲಕ್ಷಕ್ಕೂ ಅಧಿಕ ಅಡಿಕೆ ತೋಟ 10 ಸಾವಿರಕ್ಕೂ ತೆಂಗಿನ ಮರಗಳು, ಅರಣ್ಯ ಇಲಾಖೆಯ ಸಾವಿರಾರು ಮರಗಳು ನಾಶವಾಗುತ್ತಿದ್ದು, ಅರಣ್ಯ ಇಲಾಖೆಯು ಅನುಮತಿ ನೀಡಿರುವುದಿಲ್ಲ. 400 ಕೆ.ವಿ ವಿದ್ಯುತ್ ಪ್ರಕರಣ ಮಾರ್ಗವನ್ನು ಬದಲಾಯಿಸುವಂತೆ ಮತ್ತು ರೈತರ ಬೇಡಿಕೆಗಳನ್ನು ಈಡೇರಿಸದೇ ಏಕಪಕ್ಷಿವಾಗಿ ಮನಬಂದಂತೆ ಪ್ರಸರಣ ಮಾರ್ಗವನ್ನು ಅಳವಡಿಸುವ ನಿಯಮ ಉಲ್ಲಂಘನೆ ಮಾಡಿರುವುದರ ಬಗ್ಗೆ ಮಾನ್ಯ ಇಂಧನ ಸಚಿವರಲ್ಲಿ ಪ್ರಸ್ತಾಪಿಸಿರುವ ಬಗ್ಗೆ

*****

**ಉತ್ತರ** :- ರಾಜ್ಯದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹಾದುಹೋಗಲಿರುವ 400 ಕೆವಿ Double Circuit ಉಡುಪಿ-ಕಾಸರಗೋಡು ವಿದ್ಯುತ್ ಪ್ರಸರಣ ಮಾರ್ಗವು ಅಂತರ ರಾಜ್ಯ ಪ್ರಸರಣಾ ಮಾರ್ಗವಾಗಿದ್ದು, ಸದರಿ ಮಾರ್ಗವನ್ನು ಕೇಂದ್ರ ಸರ್ಕಾರವು Tariff Based Competitive Bidding (TBCB) ಆಧಾರದಲ್ಲಿ ಅನುಷ್ಠಾನಗೊಳಿಸುತ್ತಿದೆ.

ಪ್ರಸರಣಾ ಮಾರ್ಗ ಹಾದು ಹೋಗುವ ಪ್ರದೇಶದಲ್ಲಿ ಭೂಮಾಲೀಕರಿಗೆ ಅನುಕೂಲವಾಗುವಂತೆ ಮತ್ತು ಹೆಚ್ಚಿನ ಮರಗಳಿಗೆ ಹಾನಿಯಾಗುವುದನ್ನು ತಪ್ಪಿಸಲು, ಇತ್ತೀಚೆಗೆ ಪ್ರಸರಣಾ ಮಾರ್ಗವನ್ನು ಅನುಷ್ಠಾನಗೊಳಿಸುತ್ತಿರುವ ಸಂಸ್ಥೆಯು ಕೇಂದ್ರ ಸರ್ಕಾರದ ಅನುಮೋದನೆಯೊಂದಿಗೆ, ಕೆಳಕಂಡ ನವೀನ ತಂತ್ರಜ್ಞಾನ ಕ್ರಮಗಳನ್ನು ಕೈಗೊಳ್ಳುತ್ತಿದೆ:

- ಪ್ರಸರಣಾ ಗೋಪುರಗಳ ಎತ್ತರವನ್ನು ಹೆಚ್ಚಿಸುವುದು (Increasing tower height).
- ಪ್ರಸರಣ ಮಾರ್ಗದ ಅಂತರವನ್ನು ಕಡಿಮೆಗೊಳಿಸುವುದು (Reducing span at appropriate places)
- ಮಾರ್ಗವನ್ನು ಅಳವಡಿಸಲು Drone technology ಬಳಸುವುದು.

ಈ ಮೇಲಿನ ಕ್ರಮಗಳಿಂದ, ಈ ಹಿಂದೆ ಪ್ರಸ್ತಾಪಿಸಿದ್ದ 1,78,356 ಮರಗಳ ಬದಲಿಗೆ 1,28,913 ಮರಗಳನ್ನು ತೆರವುಗೊಳಿಸಬೇಕಾಗಿದ್ದು ಒಟ್ಟು 48,443 ಮರಗಳು ರಕ್ಷಿಸಲ್ಪಡುತ್ತದೆ.

ಮುಂದುವರೆದು, ಅರಣ್ಯ ಪ್ರದೇಶದಲ್ಲಿ ಹಾದುಹೋಗುವ ಮಾರ್ಗದ ರಹದಾರಿಗಾಗಿ ಕೇಂದ್ರ ಸರ್ಕಾರ ನಿಗದಿಪಡಿಸಿರುವ ಪ್ರಸರಣಾ ಮಾರ್ಗ ಅನುಷ್ಠಾನಗೊಳಿಸುತ್ತಿರುವ ಸಂಸ್ಥೆಯು ಅರಣ್ಯ ಇಲಾಖೆಯಿಂದ ಪರವಾನಗಿ ಪಡೆಯುವುದು ಕಡ್ಡಾಯವಾಗಿದ್ದು ಈ ನಿಟ್ಟಿನಲ್ಲಿ ಅರಣ್ಯ ಇಲಾಖೆಯಿಂದ Stage-1 clearance ಪಡೆದಿರುವುದಾಗಿ ತಿಳಿದುಬಂದಿದೆ.

ಈ ಯೋಜನೆಯ ಅನುಷ್ಠಾನವು ರಾಜ್ಯ ಸರ್ಕಾರದ ವ್ಯಾಪಿಗೆ ಬರುವುದಿಲ್ಲವಾದರೂ ರಾಷ್ಟ್ರೀಯ ಪ್ರಾಮುಖ್ಯತೆಯ ದೃಷ್ಟಿಯಿಂದ ಕೇಂದ್ರ ಸರ್ಕಾರವು ಅನುಮೋದಿಸಿರುವ ಅಂತರ ರಾಜ್ಯ ಪ್ರಸರಣಾ ಮಾರ್ಗದಂತೆ, ಸದರಿ ಪ್ರಸರಣಾ ಮಾರ್ಗ ರಚನೆಗೆ ಅಗತ್ಯವಿರುವ ರಹದಾರಿ ಸಮಸ್ಯೆಗಳ ಇತ್ಯರ್ಥ, RoW ಪರಿಹಾರ ಮತ್ತು ಆಡಳಿತಾತ್ಮಕ ಸಹಕಾರವನ್ನು ರಾಜ್ಯ ಸರ್ಕಾರವು ನೀಡಬೇಕಾಗಿರುತ್ತದೆ.

ಸಂಖ್ಯೆ: ಎನರ್ಜಿ 34 ಇಬಿಎಸ್ 2025

(ಕೆ.ಜೆ.ಜಾರ್ಜ್)
ಇಂಧನ ಸಚಿವರು